ಓ ಎಸ್ ನಂ. 41/2016
ಪಿ ಡಬ್ಲ್ಯೂ: 1
ದಿನಾಂಕ 20-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: 1ನೇ ಪ್ರತಿವಾದಿ ಪರ: ಶ್ರೀ ಕೆ ಎಸ್ ಆರ್ ವಕೀಲರಿಂದ:</u>

ನಾನು ಪಿಯುಸಿಯವರೆಗೆ ವಿದ್ಯಾಬ್ಯಾಸ ಮಾಡಿದ್ದು, ಕನ್ನಡ ಓದು ಬರಹ ಬರುತ್ತದೆ. ಇಂಗ್ಲೀಷ್ ಅಷ್ಟಾಗಿ ಬರುವುದಿಲ್ಲ. ನಾನು ವಿನಯ ಬಾಬು, ರವೀಂದ್ರ ಕುಮಾರ್, ವೀರಣ್ಣ ಗುಪ್ತಾ, ಸಂತೋಷ್ ಮತ್ತು ಮಿಥುನ್ ಇವರ ವಿರುದ್ದ ದಾವೆ ಸಲ್ಲಿಸಿದ್ದೇನೆ. ನಾನು ನನ್ನ ವಕೀಲರ ಮೂಲಕ 1ನೇ ಪ್ರತಿವಾದಿಗೆ ನೀಡಿದ ನೋಟೀಸಿಗೆ ಅವರು ಉತ್ತರವನ್ನು ಕೊಟ್ಟಿರುತ್ತಾರೆ ಎಂದರೆ ನಿಜ. 1ನೇ ಪ್ರತಿವಾದಿ ನೀಡಿದ ಉತ್ತರದ ಬಗ್ಗೆ ನನಗೆ ಮಾಹಿತಿ ಇದೆ. 1ನೇ ಪ್ರತಿವಾದಿ ಉತ್ತರ ನೀಡಿ ಉತ್ತರದಲ್ಲಿ ನೀವು ಯಾರೆಂದು ನನಗೆ ಗೊತ್ತಿಲ್ಲ ಎಂದು ನೀಡಿರುತ್ತಾರೆ. 1ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನನಗೆ ಗೊತ್ತಿಲ್ಲ.

ಹಳೆಯ ಅಸೆಸ್ಮೆಂಟ ನಂ. 791 ಹೊಸ ಅಸೆಸ್ಮೆಂಟ್ ನಂ.1977/13 ಮತ್ತು 1714/1 ಇರುತ್ತದೆ. ಒಟ್ಟು ವಿಸ್ತೀರ್ಣ 272+198/2 x 280 ಅಡಿ. ಅದರ ಪೈಕಿ ನನಗೆ 272+198/2 x 150 ಅಡಿ ಆಸ್ತಿಯನ್ನು ನನಗೆ ಮಾರಾಟ ಮಾಡಿದ್ದಾರೆ. ಆಸ್ತಿಯ ಮಾರಾಟ ಬಗ್ಗೆ ಮಾತುಕತೆ ತಾಲ್ಲೂಕು ಕಚೇರಿ ಬಳಿ ಆಗಿರುತ್ತದೆ. ಆ ಸಮಯದಲ್ಲಿ ದೇವರಾಜು ಎಂಬುವವರು ಪ್ರತಿವಾದಿಯನ್ನು ಪರಿಚಯ ಮಾಡಿಕೊಟ್ಟರು. ಕ್ರಯದ ಮಾತುಕತೆಯಾಗುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ಛಾಪಾ ಕಾಗದವನ್ನು ಪ್ರತಿವಾದಿಗಳೇ ತಂದಿರುತ್ತಾರೆ. ಎನ್ ಸಿ ರವೀಂದ್ರಕುಮಾರ್ ರವರನ್ನು ನಾನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ಈಗ

2 ರಿಂದ 4ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ. 2 ರಿಂದ 4ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ನಾನು ತಿಳಿದುಕೊಂಡಿಲ್ಲ.

ಈ ಹಂತದಲ್ಲಿ ಸಾಕ್ಷಿಯು ತನಗೆ ಆರೋಗ್ಯ ಸರಿ ಇಲ್ಲದೆ ಇರುವುದರಿಂದ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.